## ರಾಮಮಂದಿರದ ಲೋಕಾರ್ಪಣೆ

ಅಯೋಧ್ಯೆಯ ರಾಮಮಂದಿರ ದೇಶದ ಪ್ರವಾಸಿ ನಕ್ಷೆಗೆ ಸೇರ್ಪಡೆಗೊಂಡಿರುವ ಹೊಸ ಚುಂಬಕಸ್ಥಳ. ಬಾಲರಾಮನ ಜನ್ಮಸ್ಥಳದಲ್ಲಿ ನಿರ್ಮಾಣಗೊಂಡ ರಾಮಮಂದಿರವನ್ನು ಜನವರಿ 22ರಂದು ಬಾಲರಾಮನ ಮೂರ್ತಿಗೆ ಪ್ರಾಣ ಪ್ರತಿಷ್ಠಾಪನೆ ಮಾಡುವ ಮೂಲಕ ಲೋಕಾರ್ಪಣೆ ಮಾಡಲಾಯಿತು. ಈ ದೇಗುಲ ಒಟ್ಟು 2.7 ಎಕರೆ ವಿಸ್ತೀರ್ಣದಲ್ಲಿ ರೂಪುಗೊಂಡಿದೆ. ತಲಾ 20 ಅಡಿ ಎತ್ತರದ 3 ಮಹಡಿಗಳು ಇದರಲ್ಲಿವೆ. ದೇಗುಲ 235 ಅಡಿ ಅಗಲ, 360 ಅಡಿ ಉದ್ದ ಮತ್ತು 161 ಅಡಿ ಎತ್ತರವಾಗಿದೆ. ಮೈಸೂರಿನ ಶಿಲ್ಪಿ ಅರುಣ್ ಯೋಗಿರಾಜ್ ಕೆತ್ತಿರುವ ಬಾಲರಾಮ ವಿಗ್ರಹವನ್ನು ದೇಗುಲದ ಗರ್ಭಗುಡಿಯಲ್ಲಿ ಪ್ರತಿಷ್ಠಾಪನೆ ಮಾಡಲಾಗಿದೆ.





## ಹೆಸರಾಯಿತು ಕರ್ನಾಟಕ, ಉಸಿರಾಯಿತು ಕನ್ನಡ

ಪ್ರತಿ ವರ್ಷದ ರಾಜ್ಯೋತ್ಸವ ಸಂದರ್ಭ ಕನ್ನಡಿಗರಲ್ಲಿ ಭಾವೋತ್ಕರ್ಷಕ್ಕೆ ಕಾರಣವಾಗುತ್ತದಾದರೂ, 2024ರ ನಾಡಹಬ್ಬಕ್ಕೆ ಮತ್ತೂ ಒಂದು ಸಂಭ್ರಮ ತಳುಕು ಹಾಕಿಕೊಂಡಿತ್ತು. 1973ರ ನವೆಂಬರ್ 1ರಂದು ಮೈಸೂರು ರಾಜ್ಯಕ್ಕೆ 'ಕರ್ನಾಟಕ' ಎಂದು ನಾಮಕರಣ ಮಾಡಿದ ಚಾರಿತ್ರಿಕ ಘಟನೆಯ ಸುವರ್ಣ ಮಹೋತ್ಸವ ಸಂದರ್ಭದ ಸಂಭ್ರಮದ ಸಮಾಪ್ತಿಯ ರೂಪದಲ್ಲಿ ನವೆಂಬರ್ ತಿಂಗಳು ಒದಗಿಬಂತು. ಈ ಸಂಭ್ರಮವನ್ನು ಹೆಚ್ಚಿಸುವಂತೆ ವಾರ್ಷಿಕ 'ರಾಜ್ಯೋತ್ಸವ ಪ್ರಶಸ್ತಿ'ಗಳ ಜೊತೆಗೆ, ನೂರು ಸಾಧಕರಿಗೆ 'ಸುವರ್ಣ ಮಹೋತ್ಸವ ಪ್ರಶಸ್ತಿ'ಗಳನ್ನೂ ರಾಜ್ಯ ಸರ್ಕಾರ ನೀಡಿ ಗೌರವಿಸಿತು. ಸುವರ್ಣ ಮಹೋತ್ಸವ ಸಂಭ್ರಮಕ್ಕೆ ಪೂರಕವಾಗಿ 'ಕನ್ನಡ ಪುಸ್ತಕ ಪ್ರಾಧಿಕಾರ' ವಿಶೇಷ ಕೃತಿಗಳನ್ನೂ ಪ್ರಕಟಿಸಿದೆ.

## ರತನ್ ಟಾಟಾ: ಜನಮನದ ತಾರೆ

ದೇಶದ ಕೈಗಾರಿಕಾ ಉದ್ಯಮಕ್ಕೆ ಅಭಿವೃದ್ಧಿಯ ದಿಕ್ಸೂಚಿಯನ್ನು, ಅಭಿವೃದ್ಧಿಗೆ ನೈತಿಕ ಸ್ಪರ್ಶವನ್ನೂ ನೀಡಿದ್ದ ಹೆಸರಾಂತ ಕೈಗಾರಿಕೋದ್ಯಮಿ ರತನ್ ಟಾಟಾ (86) ಅಕ್ಟೋಬರ್ 9 ರಂದು ಮುಂಬೈನಲ್ಲಿ ನಿಧನರಾದರು. ಟಾಟಾ ಸಮೂಹ ಸಂಸ್ಥೆಗಳ ಬೆಳವಣಿಗೆಯಲ್ಲಿ ಮಹತ್ತರ ಪಾತ್ರ ವಹಿಸಿದ್ದ ಅವರು ತಮ್ಮ ಉದ್ದಿಮೆಗಳ ಜೊತೆಗೆ ರಾಷ್ಟ್ರವನ್ನೂ ಉನ್ನತಿಯೆಡೆಗೆ ಕೊಂಡೊಯ್ಯುವಲ್ಲಿ ಮಹತ್ವದ ಪಾತ್ರ ವಹಿಸಿದರು. 100ಕ್ಕೂ ಹೆಚ್ಚು ದೇಶಗಳಲ್ಲಿ 30 ಕಂಪನಿಗಳನ್ನು ನಿಭಾಯಿಸುತ್ತಿದ್ದರೂ ಸರಳ ಬದುಕು ಅವರದಾಗಿತ್ತು.

ಟಾಟಾ ಅವರು ವ್ಯಾಪಾರಕ್ಕೆ ಮಾನವೀಯತೆಯನ್ನು ಲೇಪಿಸಿ, ಹೂಡಿಕೆದಾರರ ಹಿತವನ್ನಷ್ಟೇ ಪರಿಗಣಿಸದೆ ಗ್ರಾಹಕರು ಮತ್ತು ಉದ್ಯೋಗಿಗಳ ಹಿತಾಸಕ್ತಿಯನ್ನೂ ಪರಿಗಣಿಸಿದ್ದರು. ಮುಂಬೈನ ತಾಜ್ ಹೋಟೆಲಿನಲ್ಲಿ ಘಟಿಸಿದ ಉಗ್ರರ ದಾಳಿಯ ನಂತರ ವ್ಯಾಪಾರವನ್ನು ಮರುನಿರ್ಮಿಸಿದ್ದು ಅವರ ಮುತ್ಸದ್ದಿತನಕ್ಕೆ ನಿದರ್ಶನವಾಗಿದೆ. ಚಹಾ ಕಂಪನಿ 'ಟೆಟ್ಲಿ', ಉಕ್ಕು ತಯಾರಿಸುವ 'ಕೋರಸ್' ಮತ್ತು ಕಾರು ತಯಾರಿಸುವ 'ಜಾಗ್ವಾರ್ ಲ್ಯಾಂಡ್ ರೋವರ್' ಕಂಪನಿಗಳ ಅಧಿಗ್ರಹಣವನ್ನೂ ಅವರ ಸಾಧನೆಗಳ ರೂಪದಲ್ಲಿ ನೆನಪಿಸಿಕೊಳ್ಳಬೇಕು. ರತನ್ ಟಾಟಾ ಅವರ ಮರಣಕ್ಕೆ ದೇಶದುದ್ದಕ್ಕೂ ವ್ಯಕ್ತವಾದ ಸಂತಾಪ, ಉದ್ಯಮಿಯೊಬ್ಬ ಪಡೆಯಬಹುದಾದ ಅಪರೂಪದ ಜನಮನ್ನಣೆಗೆ ಉದಾಹರಣೆಯಂತಿತ್ತು.

